ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 4

(ದಿನಾಂಕ 18-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆನ್ನುವುದನ್ನು ನಾನು ಓದಿಲ್ಲ ಮತ್ತು ಗೊತ್ತಿಲ್ಲ. ವಾದಿಯು ನನಗೆ ಕುಲಸ್ಥರು ಆಗುತ್ತಾರೆ. ವಾದಿಯು ಸಾಕ್ಷಿ ನುಡಿಯಲು ನನಗೆ ಕರೆದ ಮೇರೆಗೆ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆಂದರೆ ಸರಿ ಸಾಕ್ಷಿ ಮುಂದುವರೆದು ನನ್ನ ಜಮೀನು ಅಲ್ಲಿಯೇ ಇದೆ. ಈ ದಾವೆಯನ್ನು ಯಾರು ಯಾರ ಮೇಲೆ ದಾಖಲಿಸಿದ್ದಾರೆಂದರೆ ಸಾಕ್ಷಿಯು ವಾದಿಯು ಪ್ರತಿವಾದಿಯ ಮೇಲೆ ದಾಖಲಿಸಿದ್ದಾರೆನ್ನುತ್ತಾರೆ. ದಾವೆಯನ್ನು ಯಾವ ಕಾರಣಕ್ಕಾಗಿ ಹಾಕಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ಒಟ್ಟು 13.44 ಸೆಂಟ್ಸ ಜಮೀನು ಮೂಲತಃ ಬೀಳಗಿ ಚನ್ನಬಸಮ್ಮ ಇವರ ಹೆಸರಿನಲ್ಲಿ ಸನ್ 1968 ರಂದ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಚನ್ನಬಸಮ್ಮ ಇವರು ಸದರಿ ಆಸ್ತಿಯನ್ನು ತನ್ನ ಮೊಮ್ಮಗ ಪ್ರಭಾಕರ ಇವರ ಹೆಸರಿಗೆ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಂತರ ಪಾಲುವಿಭಾಗವಾದ ಮೇಲೆ ದಾವಾಸ್ತಿ ವಿಜಯಕುಮಾರ್ ಇವರ ಹೆಸರಿಗೆ ಬಂದಿರುತ್ತದೆಂದರೆ ಇರಬಹುದು, ಆದರೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾನೆಂದರೆ ಇರಬಹುದು, ನನಗೆ ಗೊತ್ತಿಲ್ಲ. ಪ್ರತಿವಾದಿಯ ಹೆಸರಿನಲ್ಲಿ ದಾವಾಸ್ತಿಯ ಪಹಣಿ ಬರುತ್ತವೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿರುವುದರಿಂದ ಅವನು ದಾವಾಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡುವ ಪ್ರಶ್ನೆಯೇ ಬರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ, ಆದರೆ ಅವರು ಖರೀದಿ ಮಾಡಿರುತ್ತಾರೆ ಅಷ್ಟು ಮಾತ್ರ ನನಗೆ ಗೊತ್ತು, ಉಳಿದ ವಿಚಾರ ನನಗೆ ಗೊತ್ತಿಲ್ಲವೆನ್ನುತ್ತಾರೆ. ದಾವಾಸ್ತಿಯನ್ನು ವಾಮದೇವಪ್ಪ 1970 ರಲ್ಲಿ ಹರೀದಿ ಮಾಡಿರುತ್ತಾನೆ. ಸನ್ 1971 ರಲ್ಲಿ ವಾದಿ ಖರೀದಿಸಿರುತ್ತಾರೆ. ವಿರುಪಜ್ಜನವರಿಂದ ವಾಮದೇವಪ್ಪ ದಾವಾಸ್ತಿಯನ್ನು ಖರೀದಿಸಿರುತ್ತಾನೆ.

ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 4

ವಿರುಪಜ್ಜನ ಹೆಸರಿನಲ್ಲಿ ಪಹಣಿ ಇರಲಿಲ್ಲ ಆದ್ದರಿಂದ ವಿರೂಪಜ್ಜನಿಗೆ ವಾಮದೇವಪ್ಪ ಜಮೀನನ್ನು ಖರೀದಿಸಲು ಬರುವುದಿಲ್ಲವೆಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ವಾಮದೇವ್ ನಿಂದ ವಾದಿಯು ಜಮೀನನ್ನು ಖರೀದಿಸಿರುತ್ತಾರೆ. ವಾಮದೇವ್ ಹೆಸರಿನಲ್ಲಿ ಪಹಣಪಿ ಇರಲಿಲ್ಲವೆಂದರೆ ನನಗೆ ಗೊತ್ತಿಲ್ಲ. ವಾಮದೇವ್ ಹೆಸರಿನಲ್ಲಿ ಪಹಣಿ ಇಲ್ಲದೇ ಇರುವುದರಿಂದ ವಾದಿ ಜಮೀನನ್ನು ಹರೀದಿಸಲು ಬರುವುದಿಲ್ಲವೆಂದರೆ ಸಾಕ್ಷಿಯು ವಾದಿ ಜಮೀನನ್ನು ಖರೀದಿಸಿದ ವಿಚಾರ ನನಗೆ ಗೊತ್ತು ಎನ್ನುತ್ತಾರೆ. ವಾದಿ ಖರೀದಿಸಿರುತ್ತಾರೆ ಅನ್ನುವ ಸಮಯದಲ್ಲಿ ದಾವಾಸ್ತಿಯ ಪಹಣಿ ಬೆಳಗಿ ಚನ್ನಬಸಮ್ಮ ಇವರ ಹೆಸರಿನಲ್ಲಿತ್ತು ಎಂದರೆ ಇರಬಹುದು ನನಗೆ ಗೊತ್ತಿಲ್ಲವೆನ್ನುತ್ತಾರೆ. ವಾಮದೇವ್ ಮತ್ತು ವಿರುಪಾಕ್ಷಪ್ಪ ಇವರ ಹೆಸರಿನಲ್ಲಿ ಪಹಣಿ ಇಲ್ಲದೇ ಇರುವುದರಿಂದ ಅವರಿಗೆ ಜಮೀನನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲವೆಂದರೆ ಇರಬಹುದು ಅದರ ಬಗ್ಗೆ ನನಗೆ ಗೊತ್ತಿಲ್ಲವೆನ್ನುತ್ತಾರೆ. ಪ್ರತಿವಾದಿಯರಿಗೆ ದಾವಾ ಜಮೀನು ಅವರ ವಂಶಸ್ಥರಿಂದ ಬಂದಿರುತ್ತದೆಂದರೆ ಇರಬಹುದು ನನಗೆ ಗೊತ್ತಿಲ್ಲ. ಪಹಣಿ ಪತ್ರಿಕೆಗಳು ಅವರ ಹೆಸರಿನಲ್ಲಿರುವುದರಿಂದ ಅವರೇ ಸಾಗು ಮಾಡುತ್ತಾರೆಂದರೆ ಸರಿ. ದಾವಾಸ್ತಿಗೆ ಪ್ರತಿವಾದಿ ಮತ್ತು ಅವರ ಕುಟುಂಬದವರೇ ಸ್ವಾಧೀನ ಮತ್ತು ಮಾಲೀಕರು ಇರುತ್ತಾರೆಂದರೆ ಸರಿ. ದಾವಾಸ್ತಿಯ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ